# ರಾಜ್ಯದಲ್ಲಿ ಯಾತ್ರಾ ವರ್ಷ!



2017 ಕರ್ನಾಟಕದ ಮಟ್ಟಿಗೆ ಮಹತ್ವದ ವರ್ಷ. ಒಮ್ಮಿಂದೊಮ್ಮೆಲೆ ರಾಜಕೀಯ ಯಾತ್ರೆಗಳ ಪರ್ವ ಶುರುವಾಗಿರುವುದು ವರ್ಷದ ವಿಶೇಷ. ರಾಜಕೀಯದ ಗುಟುರು, ಧರ್ಮದ ರಾಜಕೀಯ, ಐಟಿ ದಾಳಿಗಳು ಸುದ್ದಿ ಮಾಡಿದವು. ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ ಗೌರಿ ಲಂಕೇಶ್ ಹತ್ಯೆ ರಾಜ್ಯದ ಸಾಂಸ್ಕೃತಿಕ ಲೋಕದಲ್ಲಿ ಬಿರುಗಾಳಿ ಎಬ್ಬಿಸಿದ್ದು ಸುಳ್ಳಲ್ಲ.

★ ವೈ.ಗ. ಜಗದೀಶ್

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಶರಣರ ನುಡಿ ಸದ್ಯದ ಕರ್ನಾಟಕ ರಾಜಕೀಯಕ್ಕೆ ಆಪ್ತವಾಗುವಂತಿದೆ. ಸ್ಥಾವರವೇ ನಿತ್ಯ ಎಂದು ಭ್ರಮಿಸಿಕೊಂಡಂತೆ ನಾಲ್ಕೂವರೆ ವರ್ಷಗಳ ಕಾಲ ಮೈಮರೆತು ಮಲಗಿದವರೆಲ್ಲರೂ ಈಗ ದಿಗ್ಗನೆದ್ದು, ಮೇಳ ಕಟ್ಟಿಕೊಂಡು ರಾಜ್ಯದ ದಿಕ್ಕುದಿಕ್ಕಿಗೆ ದಂಡಯಾತ್ರೆ ಹೊರಟಿದ್ದಾರೆ.

ಚುನಾವಣಾ ವರ್ಷದ ಅರ್ಧ ಆಯಸ್ಸು ಕಳೆಯುವ ಹೊತ್ತಿಗೆ ಕನ್ನಡ ನಾಡಿನ ನೆಲದಲ್ಲಿ 'ಯಾತ್ರೆಗಳ ಪರ್ವ' ಶುರುವಾಗಿದೆ. ಅಶ್ವಮೇಧ ಕುದುರೆಯನ್ನು ಕಟ್ಟಿ ಹಾಕುವ ತೆರದಿ ಮೂರು ಪಕ್ಷಗಳ ನೇತಾರರು ಯುದ್ಧಕ್ಕೆ ಅಣಿಯಾದವರಂತೆ ನಾಡು ಸುತ್ತುತ್ತಿದ್ದಾರೆ. ಕರ್ನಾಟಕದ ರಾಜಕಾರಣದಲ್ಲಿ ಇಷ್ಟು ವಿಸ್ತೃತ, ವ್ಯಾಪಕವಾಗಿ ಯಾತ್ರೆ ನಡೆಯುತ್ತಿರುವುದು ಇದೇ ಮೊದಲು. 1999 ರಲ್ಲಿ ಎಸ್.ಎಂ. ಕೃಷ್ಣ ಈ ರೀತಿಯಲ್ಲಿ 'ಪಾಂಚಜನ್ಯ ಯಾತ್ರೆ' ಮಾಡಿದ್ದರು. ಹಿಂದೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಗಣಿ ಲೂಟಿ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿ 15 ದಿನ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ಮಾಡಿದ್ದರು. ಈ ಎರಡೂ ಯಾತ್ರೆಗಳು ಕಾಂಗ್ರೆಸ್ ಗೆ ವಿಜಯದ ಬಾಗಿಲು ತೆರೆದು, ವಿಧಾನಸೌಧದ ಮೂರನೇ ಮಹಡಿಯನ್ನು ಹತ್ತಿಸಿದ್ದವು.

ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ನೇರ ಅಥವಾ ಪರೋಕ್ಷ ಮಾರ್ಗಗಳಿಂದ ಕಮಲ ಪತಾಕೆ ಹಾರಿಸಿರುವ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಜೋಡಿ, ಇದೀಗ ದಕ್ಷಿಣದಲ್ಲಿ ಸಾಮ್ರಾಜ್ಯ ವಿಸ್ತರಣೆಗೆ ಗುರಿ ಇಟ್ಟಿದ್ದಾರೆ. ದಕ್ಷಿಣದ ಹೆಬ್ಬಾಗಿಲಿನಂತಿರುವ ಕರ್ನಾಟಕದಲ್ಲಿ ಮತ್ತೆ ಕೇಸರಿ ಬಾವುಟ ಹಾರಿಸಿದರೆ, ಶ್ರೀಲಂಕಾ ಗಡಿ ಅಂಚಿನವರೆಗೂ ಬಿಜೆಪಿ ತಳವೂರಿಸುವುದು ಅವರ ಕನಸು.

ಅದನ್ನು ಸಾಕಾರಗೊಳಿಸುವ ಸಲುವಾಗಿ ಯಾತ್ರಾ ಸರಣಿಯನ್ನೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಆರಂಭಿಸಿದರು. ಜನಸ್ಪಂದನ ಯಾತ್ರೆ ಹೆಸರಿನಲ್ಲಿ 224 ವಿಧಾನಸಭಾ ಕ್ಷೇತ್ರಗಳಲ್ಲೂ ಸಂಚರಿಸಿದರು. ಆದರೆ, ಅದರಿಂದ ನಿರೀಕ್ಷಿತ ಯಶಸ್ಸು ನೀಡಲಿಲ್ಲ ಎಂಬುದು ಷಾ ಗಮನಕ್ಕೆ ಬಂದಿತು. 'ತಳ'ಸ್ಪರ್ಶಿ ಮಾಹಿತಿ ಇಟ್ಟುಕೊಂಡು ಕರ್ನಾಟಕದಲ್ಲಿ ಮೂರು ದಿನ ಮೊಕ್ಕಾಂ ಮಾಡಿದ ಅವರು, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿನ ಪಕ್ಷದ ಸಂಘಟನೆಯ ಬಗ್ಗೆ ಪಾಠ ಮಾಡಿದರು. ಉತ್ತರ ಪ್ರದೇಶದಲ್ಲಿ ಜಯಭೇರಿ ಬಾರಿಸಲು ಕಾರಣವಾಗಿದ್ದ ಯಾತ್ರೆ, ರ್‍ಯಾಲಿ ಮಾದರಿಯಲ್ಲಿಯೇ ಕರ್ನಾಟಕದಲ್ಲಿ ಮಾಡಬೇಕು ಎಂದು ಫರ್ಮಾನು ಹೊರಡಿಸಿದರು. ಆಗ ರೂಪಿತವಾಗಿದ್ದೇ 75 ದಿನಗಳ ನವಕರ್ನಾಟಕ ನಿರ್ಮಾಣ ಪರಿವರ್ತನಾ ಯಾತ್ರೆ. ಬೆಂಗಳೂರಿನಲ್ಲಿ ನವೆಂಬರ್ 2ರಂದು ಯಾತ್ರೆ ಶುರುವಾಯಿತು. ಜನರು ಮತ್ತು ಕಾರ್ಯಕರ್ತರು ಸಾಕಷ್ಟು ಬರದೇ ಇದ್ದುದರಿಂದ ಸಮಾರಂಭ ಪೇಲವವಾಗಿ, ಮೊದಲ ವಿಘ್ನ ಎದುರಾಯಿತು. ಅದೀಗ 45 ದಿನ ಪೂರ್ಣಗೊಳಿಸಿದೆ.